# ಸಲ್ಮಾನ್ ಮತ್ತು ಈದ್



ಸಾಮಾನ್ಯವಾಗಿ ಈದ್ ದಿನ ಸಲ್ಮಾನ್ ಖಾನ್‌ನ ಒಂದು ಸಿನಿಮಾ ಬಿಡುಗಡೆ ಆಗಲೇಬೇಕು. ಇದು ಕೆಲವು ವರ್ಷಗಳಿಂದ ಆತ ಪಾಲಿಸಿಕೊಂಡು ಬಂದಿರುವ ಅಲಿಖಿತ ನಿಯಮ. 2020ರ ಈದ್ ಗೆ ಸಲ್ಮಾನ್ ಅಭಿನಯದ 'ಇನ್ಶಾ ಅಲ್ಲಾಹ್' ಸಿನಿಮಾ ಬಿಡುಗಡೆ ಆಗುವುದೆಂದು ಲೆಕ್ಕ ಹಾಕಲಾಗಿತ್ತು. ಆದರೆ ಈಗ ಲೆಕ್ಕ ತಪ್ಪಿದೆ. 20 ವರ್ಷಗಳ ಬಳಿಕ ನಿರ್ದೇಶಕ ಸಂಜಯ್‌ಲೀಲಾ ಬನ್ಸಾಲಿ ಜೊತೆಗೂಡಿ ಸಲ್ಮಾನ್ ಕೆಲಸ ಆರಂಭಿಸಿದ್ದ 'ಇನ್ಶಾ ಅಲ್ಲಾಹ್' ಚಿತ್ರೀಕರಣ ಸ್ಥಗಿತಗೊಂಡಿದೆ. ಈ ಸಿನಿಮಾ ಕೈಬಿಡಲು ಬನ್ಸಾಲಿ ಮತ್ತು ಸಲ್ಮಾನ್ ಜೊತೆಗೂಡಿ ನಿರ್ಧರಿಸಿದ್ದಾರಂತೆ. ಕಾರಣ ಏನೆನ್ನುವುದು ಗೊತ್ತಾಗಿಲ್ಲ. ಸಲ್ಮಾನ್ ಮಾಡಿರುವ ಟ್ವೀಟ್‌ನಲ್ಲಿ 'ಸಂಜಯ್ ತನ್ನ ಸಿನಿಮಾಗೆ ದ್ರೋಹ ಮಾಡುವುದಿಲ್ಲ. ಆತನಿಗೆ ತನ್ನದೇ ಆದ ಶೈಲಿಯಿದೆ. ಆತ ತನ್ನ ಟ್ರ್ಯಾಕ್ ಬಿಟ್ಟು ಹೋಗುವುದನ್ನು ನಾನು ಒಪ್ಪುವುದಿಲ್ಲ. ಅವನ ಸಿನಿಮಾ ಅವನು ಬಯಸಿದಂತೆಯೇ ಇರಬೇಕು. ಇನ್ಶಾ ಅಲ್ಲಾಹ್ (ದೇವರ ಇಚ್ಛೆಯಿದ್ದರೆ) ಮುಂದೆ ಯಾವತ್ತಾದರೂ ನಾವಿಬ್ಬರು ಜತೆಗೂಡಿ ಕೆಲಸ ಮಾಡುತ್ತೇವೆ. ನಮ್ಮ ಸ್ನೇಹ ಹಾಗೆಯೇ ಇದೆ' ಎಂದಿದ್ದಾನೆ.

ಹಾಗಾದರೆ ಮುಂದಿನ ಈದ್‌ಗೆ ಸಲ್ಲೂ ಮಿಯಾನ ಸಿನಿಮಾ ಬಿಡುಗಡೆ ಇಲ್ಲವೆ ಎಂದು ಪ್ರಶ್ನಿಸಿದರೆ, 'ನೀವು ಬಯಸಿದಾಗ ನಾನು ನಿಮ್ಮ ಮನಸ್ಸಿಗೂ ಬರುತ್ತೇನೆ, ಈದ್‌ಗೂ ಬರುತ್ತೇನೆ' ಎಂದೂ 'ಕಿಕ್' ಸಿನಿಮಾ ಹಳೆಯ ಡೈಲಾಗನ್ನು ಸಲ್ಲೂ ಉದ್ಧರಿಸಿದ್ದಾನೆ. ಬಾಲಿವುಡ್ ಪಂಡಿತರ ಊಹೆಯಂತೆ ಮುಂದಿನ ವರ್ಷದ ಈದ್‌ಗೆ, 'ಕಿಕ್ 2' ಬಿಡುಗಡೆ ಆಗಬಹುದು. 2014ರ ಈ ಸೂಪರ್‌ಹಿಟ್ ಸಿನಿಮಾದ 2ನೇ ಭಾಗಕ್ಕೆ ಚಿತ್ರಕಥೆ ಸಿದ್ಧವಾಗುತ್ತಿದ್ದು, ಸಾಜಿದ್ ನಾಡಿಯದ್‌ವಾಲಾ ಅದರಲ್ಲಿ ಫುಲ್ ಬ್ಯುಸಿ ಎಂದು ನಟಿ ಜಾಕ್ವೆಲಿನ್ ಫೆರ್ನಾಂಡಿಸ್ ಇನ್ನೊಂದೆಡೆ ಹೇಳಿಕೆ ನೀಡಿದ್ದಾಳೆ.

ಆದರೆ ಈ ವರ್ಷದ ಡಿಸೆಂಬರ್‌ನಲ್ಲಿ ಸಲ್ಮಾನ್‌ನ 'ದಬಾಂಗ್ 3' ಬಿಡುಗಡೆಯಾಗುವುದು ಖಚಿತವಾಗಿದೆ. ಹಾಗಾಗಿ ಸಲ್ಲೂ ಅಭಿಮಾನಿಗಳು ನಿಶ್ಚಿಂತೆಯಿಂದ ಇರಬಹುದು. ■

# ಆಲಿಯಾ ಚಿಂತೆ



ಸಲ್ಲೂ ಅಭಿಮಾನಿಗಳು ನಿಶ್ಚಿಂತೆಯಿಂದ ಇರಬಹುದು, ಆದರೆ ಆಲಿಯಾ ಭಟ್ ಮಾತ್ರ 'ಇನ್ಶಾ ಅಲ್ಲಾಹ್' ಸ್ಥಗಿತಗೊಂಡದ್ದರಿಂದ ಚಿಂತಾಕ್ರಾಂತಳಾಗಿದ್ದಾಳೆ. ಬಾಲ್ಯದಿಂದಲೇ ಆಕೆ ಸಲ್ಮಾನ್ ಖಾನ್ ಜೊತೆಗೆ ನಟಿಸಬೇಕೆಂಬ ಬಯಕೆ ಇಟ್ಟುಕೊಂಡಿದ್ದಳಂತೆ. ಹಾಗಾಗಿ ಬನ್ಸಾಲಿ ಮತ್ತು ಸಲ್ಮಾನ್ ಜೋಡಿಯ ಸಿನಿಮಾದಲ್ಲಿ ನಟಿಸುವ ಆಫರ್ ಬಂದಾಗ ಆಕೆ ಖುಷಿಯಿಂದ ತನ್ನೆಲ್ಲ ಡೇಟ್‌ಗಳನ್ನೂ ಹೊಂದಾಣಿಕೆ ಮಾಡಿ ಒಪ್ಪಿಕೊಂಡಿದ್ದಳು. ಆ ಸಂದರ್ಭದಲ್ಲಿ ಅಮೀರ್ ಖಾನ್ ಪ್ರೊಡಕ್ಷನ್‌ನ ಒಂದು ಸಿನಿಮಾದ ಆಫರ್ ಬಂದದ್ದನ್ನೂ ಆಕೆ ನಿರಾಕರಿಸಿದ್ದಳಂತೆ. ಈಗ, ಅತ್ತ ಅದೂ ಇಲ್ಲ, ಇತ್ತ ಇದೂ ಇಲ್ಲ ಎಂಬ ಸ್ಥಿತಿಯಿಂದಾಗಿ ಆಕೆ ನಿರಾಶೆಗೊಂಡಿದ್ದಾಳೆ.

ಹಾಗೆಂದು ಆಲಿಯಾಗೆ ಅವಕಾಶಗಳ ಕೊರತೆ ಇಲ್ಲ. ಬಿಗ್‌ಬಜೆಟ್ ಸಿನಿಮಾ 'ಬ್ರಹ್ಮಾಸ್ತ್ರ' ರೆಡಿಯಾಗಿದೆ. ಅದರ ಬೆನ್ನಲ್ಲೇ 'ಆರ್‌ಆರ್‌ಆರ್' ಮತ್ತು 'ಸಡಕ್ 2' ಬರಲಿದೆ. ಫೆಬ್ರುವರಿಯಿಂದ ಆಕೆ 'ತಖ್ತ್' ಸಿನಿಮಾದಲ್ಲಿ ಅಭಿನಯಿಸಬೇಕು. ಅದೇನೇ ಇದ್ದರೂ, ಬನ್ಸಾಲಿ ಮತ್ತು ಸಲ್ಮಾನ್ ಎಂಬ ಬಾಲಿವುಡ್‌ನ ಇಬ್ಬರು ಸೂಪರ್‌ಸ್ಟಾರ್‌ಗಳ ಜೊತೆಗೆ ಕೆಲಸ ಮಾಡುವ ಅವಕಾಶ ಕಳೆದುಹೋದದ್ದಕ್ಕಾಗಿ ಆಕೆ ತುಂಬ ಪಶ್ಚಾತ್ತಾಪ ಪಡುತ್ತಿದ್ದಾಳಂತೆ. ಈ ಮಧ್ಯೆ 'ಇನ್ಶಾ ಅಲ್ಲಾಹ್'ದಲ್ಲಿ ಶಾರೂಕ್ ನಟಿಸಲಿದ್ದಾನೆ ಎನ್ನುವ ಗಾಳಿಸುದ್ದಿಯೂ ಹಬ್ಬಿದೆ.

■ ಬಿಂದು